ಶ್ರೀ ಕೆ. ಎಫ್. ಪಾಟೀಲ್.—ಯಾವ ಜಾತಿಯ ಕುರಿಗಳನ್ನು ಹಂಚಬೇಕೆಂಬ ವಿಷಯವನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಜಿ. ವೆಂಕಟೇಗೌಡ.—ಯಾವಯಾವ ಕೆಲಸಗಳಿಗೆ ಎಷ್ಟೆಷ್ಟು ಗ್ರಾಂಟನ್ನು ಕೊಟ್ಟಿದ್ದೀರಿ ಎಂಬ ಮಾಹಿತಿಯನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಅಷ್ಟೆಲ್ಲಾ ವಿವರಗಳನ್ನು ಕೊಡುವುದಕ್ಕೆ ನನ್ನಲ್ಲಿ ಅಂಕಿ ಅಂಶಗಳಿಲ್ಲ. ಸಿಬ್ಬಂದಿ ಅವುಗಳಿಗೆ ರೋಗರುಜಿನ ಬಂದರೆ ನಿವಾರಣೆ ಮಾಡುವದಕ್ಕೆ ಮತ್ತು ಅವುಗಳನ್ನು ಇನ್ನೂ ಸಂಗ್ರಹಿಸುವ ಉದ್ದೇಶ ಇರುವುದರಿಂದ ಅದರ ವಿವರಗಳನ್ನು ಇಲ್ಲಿ ಕೊಟ್ಟಿಲ್ಲ.

ಶ್ರೀ ಕುಂದೂರು ರುದ್ರಪ್ಪ.—ಮೆರಿನೋ ಜಾತಿಯ ಕುರಿಗಳ ತಳಿಯನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಖರೀದಿಗೆ ಕೇಳಿದರೆ ಇರಾಖೆಯವರು ಕೊಡುತ್ತಾರೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಮೆರಿನೋ ಜಾತಿಯ ಕುರಿಗಳು ಸಾಕಷ್ಟು ನಮ್ಮಲ್ಲಿಲ್ಲ. ಅವುಗಳನ್ನು ಯಾರಾದರೂ ಖರೀದಿಗೆ ಕೇಳಿದರೆ, ತರಿಸಿಕೊಡಲು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಟಿ. ಕೆ. ಕಂಬ್ಳಿ.—ಆ ಸಂಘದವರು ವರದಿ ಕೊಡದೇ ಇರುವುದಕ್ಕೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಕೆ. ಎಫ್. ಪಾಟೀಲ್.—ಏಕೆ ವರದಿಯನ್ನು ಕೊಟ್ಟಿಲ್ಲವೆಂಬುದಕ್ಕೆ ಸಂಘದವರೇ ತಪ್ಪಿತಸ್ಥರು ಎಂದು ಕಂಡರೆ, ಆಗ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

Sri J. B. MALLARADHYA.—Are the Government aware that during the year 1954-55 and previous to that, Mysore Government had a very lucrative trade in sending shawls made out of Marina wool manufactured in Kolar District which was a private venture ? Why is it Government have not given sufficient attention to this ?

ಶ್ರೀ ಕೆ. ಎಫ್. ಪಾಟೀಲ್.—1954-55 ನೆಯ ಇಸವಿಗಿಂತ ಮೊದಲು ಏನಿತ್ತೋ ನನಗೆ ಗೊತ್ತಿಲ್ಲ. ಅದನ್ನು ತಿಳಿದುಕೊಳ್ಳುವ ಅವಶ್ಯಕತೆ ಇದ್ದರೆ, ತಿಳಿದುಕೊಳ್ಳುತ್ತೇವೆ.

Scheme for growing Sea Island Cotton.

*Q.—312. Sri B. VAIKUNTA BALIGA (Mangalore).—

Will the Government be pleased to state :—

(*a*) the details of the scheme for growing Sea Island cotton in the Mysore State and the yield got from the various Districts mentioning the yield per acre, for every unit of cultivation ;

(*b*) how many of these experiments at cultivation are carried on by the State Government and with what results ;

(*c*) how many are carried on by the Central Government and at what expense ;

(*d*) what assistance has been given for private enterprise in the cultivation of Sea Island cotton and what are the results of experiments so made by private enterprise ;

(*e*) whether they propose to formulate a detailed scheme for the next five years for encouragement of cultivation of Sea Island cotton and place it on the table of the House, or otherwise publish it ?

A.—Sri K. F. PATIL (Minister for Agriculture and Food).—

(*a*) The co-ordinated scheme on Sea Island cotton financed by the Centre is functioning in the States of Mysore, Kerala and Assam under the direct supervision of a Special Officer appointed by the Government of India. This is the second year of the scheme. The trials were mostly exploratory in nature. Seeds were distributed for sowing 1,000 acres in Mysore State to the cultivators of South Kanara, Mysore, Coorg, Hassan, Chickmagalur, Shimoga and North Kanara Districts. Pickings are in progress and it is too early to furnish the final acre yields of the different Districts. The yields obtained so far are as under :—

Sl. No.	*Districts*	*Average yield per acre*	*Remarks*
1	South Kanara ...	252 lbs.	Packing in progress.
2	Coorg ...	192 ,,	do
3	Shimoga ...	67 ,,	do
4	Hassan ...	Data being collected.	do
5	Chickmagalur ...	do	do
6	North Kanara ...	do	do
7	Mysore ...	do	do

(*b*) The State Government have laid out 50 Demonstration plots in Shimoga, South Kanara, Hassan, Coorg, Chickmagalur and North Kanara Districts in addition to the cultivation of this type of cotton on Government Farms in Mangalore, Frazerpet,

Ponnampet and Sirsi. As pickings are in progress final results are awaited. Due to unfavourable seasonal conditions and late sowings, failure of crops is reported in quite a few trials.

(*c*) The Central Government have sanctioned a sum of Rs. 2,42,000 for the year 1958-59 for the experiments on Sea Island cotton in the States of Kerala, Assam and Mysore States. In addition a loan of Rs. 4 lakhs has also been sanctioned. Out of the above sum Rs. 72,390 is set apart for Mysore State for experiments and about Rs. 2 lakhs for Mysore for loan in kind, interim relief, etc. As per the programme the items of work include introduction, extension, exploratory trials, survey and research on Agronomy and Breeding. All the items of work are in progress from 1957-58 onwards, in the different centres of Mysore State. The agronomic work is being done at Mangalore in the Sea Island Cotton Farm at Bajpe. The cost of 50 Demonstration plots laid in Mysore State is Rs. 3,500.

(*d*) Seeds, fertilisers and plant protection chemicals were given free to the cultivators under the scheme in the first year and in the second year they were given loan in kind. There was good response from the private cultivators to such concessions given by the Government of India. Regarding the results no large scale private enterprise has been started in the State so far, pending the selection of potential areas, want of more agronomic information, etc. An attempt will be made in the year 1959-60 to start large scale private farms. Hence the results cannot be assessed.

(*e*) This is an all-India co-ordinated scheme financed and supervised by the Government of India in the States of Mysore, Kerala and Assam. The work is being reviewed and crop inspected by a special sub-committee appointed by the Indian Central Cotton Committee. The detailed scheme for the future years are being formulated and discussed by an expert body of the Indian Central Cotton Committee after considering the progress made during 1957-58 and 1958-59. Starting of a parallel scheme in the State is, therefore, not contemplated for the present pending the results of experiments carried on by the Government of India.

Sri B. VAIKUNTA BALIGA.—Information regarding the yield for every unit of cultivation has not been furnished; will it be furnished at a later date?

ಶ್ರೀ ಕೆ. ಎಫ್. ಪಾಟೀಲ್.—ಸೌತ್ ಕೆನರಾದಲ್ಲಿ ಮಾತ್ರ 24,127 ಪೌಂಡುಗಳಷ್ಟು ಹತ್ತಿ ಬಂದಿದೆ. ಇತರ ಪ್ರದೇಶಗಳ ವರದಿ ಇನ್ನೂ ಬರಬೇಕು.

Sri B. VAIKUNTA BALIGA.—Has the Government prepared a scheme for 1959-60?

ಶ್ರೀ ಕೆ. ಎಫ್. ಪಾಟೀಲ್.—ಇನ್ನು ಏಪ್ರಿಲ್ ಕೊನೆಯೊಳಗೆ ಎಲ್ಲಾ ಹತ್ತಿ ನುಗ್ಗಿಯಾಗಿ ಪೂರಾ ಮಿಗುವುದರಿಂದ, ಪಿಕಿಂಗ್ ಆಪ್ ಆಗಬೇಕಾಗಿರುವುದರಿಂದ, ವರದಿ ಇನ್ನೂ ಬರಲಿಲ್ಲ. ಅದನ್ನು ತರಿಸಿ ಕೊಡುತ್ತೇವೆ.

Sri B. VAIKUNTA BALIGA.—I am not asking about the provision in the Budget. But whether a scheme specifying the number, or the persons, or the expenditure, or the survey numbers has been prepared?

ಶ್ರೀ ಕೆ. ಎಫ್. ಪಾಟೀಲ್.—ಏರಿಯಾ ಐದು ಸಾವಿರ ಎಕರೆ. ಅದನ್ನು ಇನ್ನೂ ಎಕ್ಸ್‌ಟೆಂಡ್ ಮಾಡುವ ದೃಷ್ಟಿಯಿಂದಲೇ ಸರ್ಕಾರದವರು ಬಡ್ಜೆಟ್ಟಿನಲ್ಲಿ ಹಣವನ್ನು ತೆಗೆದಿಟ್ಟಿದ್ದಾರೆ. ಡೀಟೇಲ್ಡ್ ವಿವರಗಳನ್ನು ಆಮೇಲೆ ಓದಿಸಲಾಗುತ್ತದೆ. ಈಗ ಸರ್ವೆ ನಂಬರ್ ಆಗಿರುವ ತಾಲ್ಲೂಕುಗಳ ವಿವರಗಳು ನನ್ನಲ್ಲಿಲ್ಲ. ಯಾವಯಾವ ಜಿಲ್ಲೆಯಲ್ಲಿ ಏನೇನು ಪ್ರಯೋಗಗಳನ್ನು ಮಾಡಬೇಕಾಗಿದೆಯೆಂಬುದನ್ನು ವಿವರಗಳು ಬಂದ ಮೇಲೆ ತಿಳಿಸುತ್ತೇನೆ.

Sri B. VAIKUNTA BALIGA.—With regard to (*e*) there is a slight misconception. I do not wish that a parallel scheme should be formulated by the State Government. I want to know whether any further encouragement in the shape of price, rentals, assessment, etc., is going to be given?

ಶ್ರೀ ಕೆ. ಎಫ್. ಪಾಟೀಲ್.—ಅದು ಸ್ವಂತ ಕಲ್ಪನೆ ಏನೂ ಅಲ್ಲ. ಸರ್ಕಾರ ಈ ಯೋಜನೆಯನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆಸುವುದಕ್ಕೆ ಬದಲು ಅದನ್ನು ಪ್ರಯೋಗ ರೂಪದಲ್ಲಿ ಕಾರ್ಯಗತ ಮಾಡಬೇಕೆಂಬ ವಿಚಾರವನ್ನು ತಮ್ಮ ಗಮನದಲ್ಲಿ ತೆಗೆದುಕೊಳ್ಳುವುದರಲ್ಲದೆ.

Sri G. VENKATAI GOWDA.—May I know the reason for the vast difference in the average yield per acre in South Kanara and the rest of the State?

ಶ್ರೀ ಕೆ. ಎಫ್. ಪಾಟೀಲ್.—ಅದನ್ನು ಯಾವ ಕಾಲದಲ್ಲಿ ಬತ್ತನೆ ಮಾಡಬೇಕು ಎಂಬುದನ್ನು ಗಮನಿಸ ಬೇಕು. ಮಳೆಗಾಲ ಬರುವ ದೃಷ್ಟಿಯಿಂದ ಅನೇಕ ಬದಲಾವಣೆಗಳಾಗುತ್ತವೆ. ಬೇರೆ ಬೇರೆ ಸ್ಥಳ ಗಳಲ್ಲಿಯೂ ಇದೇ ರೀತಿಯಾಗುತ್ತದೆ.

New type basins in Kanakapur Government Filatures.

*Q.—380. Sri M. LINGE GOWDA (Kanakapura).—

Wll the Government be pleased to state :—

(*a*) the number of new type basins erected in Kanakapur Government Silk Filatures ;

(*b*) when were they put into working order ;

(*c*) whether it is a fact that 24 basins have been stopped from 12th January 1959 ;

(*d*) if so, why ?

A.—Sri B. D. JATTI (Chief Minister).—

(*a*) 4 Sections of 24 basins in each Section totalling 96 basins in all have been erected.

(*b*) 24 basins from 18th September 1957,
24 basins from 31st March 1958
24 basins from 1st May 1958
24 basins from 24th Augut 1958.

(*c*) All the 24 basins were not stopped.

(*d*) But 12 out of 24 could not be worked from January 1959 due to want of reels.

ಶ್ರೀ ಎಂ. ಲಿಂಗೇಗೌಡ.—24 ಬೇಸಿನ್ನುಗಳನ್ನು ಸ್ಥಾಪಿಸಿರುವ ಪೈಕಿ 12 ಬೇಸಿನ್ನುಗಳು ಕೆಲಸ ಮಾಡದೇ ನಿಂತಿದ್ದುದು ಎಂದಿನಿಂದ. ಈಗ ಎಷ್ಟು Out of order ಆಗಿವೆ ?

ಶ್ರೀ ಬಿ. ಡಿ. ಜತ್ತಿ.—ಡಿಸೆಂಬರ್ 1958 ರಿಂದ. ಈಗ 14 ಬೇಸಿನ್ನುಗಳು Out of order ಆಗಿವೆ.

ಶ್ರೀ ಎಂ. ಲಿಂಗೇಗೌಡ.—ಈಗ ಸಂಪೂರ್ಣವಾಗಿ 24 ಬೇಸಿನ್ನುಗಳೂ ಕೆಲಸ ಮಾಡುತ್ತಿವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri B. D. JATTI.—Yes, Sir.

ಶ್ರೀ ಎಂ. ಲಿಂಗೇಗೌಡ.—ರೀಲ್ಸ್‌ಗೋಸ್ಕರ ಈಚೆಗೆ ಕೆಲವು ಕೆಲಸ ಮಾಡುತ್ತಿಲ್ಲ, ಕೆಲಸ ನಿಂತಿದೆ ಎಂದು ಹೇಳಿದ್ದೀರಿ. ಈ ರೀಲುಗಳನ್ನು ಯಾರು ಸಪ್ಲೈ ಮಾಡುವವರು ?

ಶ್ರೀ ಬಿ. ಡಿ. ಜತ್ತಿ.—ಬೆಂಗಳೂರಿನ ಎರೆಕ್ ಫ್ಯಾಕ್ಟರಿಯವರು.

ಶ್ರೀ ಎಂ. ಲಿಂಗೇಗೌಡ.—ಎರೆಕ್ಟ್ರಿಕ್ ಫ್ಯಾಕ್ಟರಿ ಯವರು ರೀಲ್ಸ್ ಇಲ್ಲವೆಂದು ಹೇಳಿದರೇ ಅಥವಾ ಅವರೇ ಇಂಡೆಂಟ್ ಮಾಡಿದರೇ ?

ಶ್ರೀ ಬಿ. ಡಿ. ಜತ್ತಿ.—ಮೊದಲು ಸರ್ಕಾರಕ್ಕೆ ಅವನ್ನು ತೆಗೆದುಕೊಂಡಮೇಲೆ, ಸುಮಾರು 12 ಬೇಸಿನ್ನುಗಳು ಸರಿಯಾಗಿ ಉಪಯೋಗವಾಗಲಿಲ್ಲ ಆದ್ದರಿಂದ ಕೆಲವು ಬೇಸಿನ್ನುಗಳಲ್ಲಿ ಕೆಲಸ ನಿಂತವು.

ಶ್ರೀ ಎಂ. ಲಿಂಗೇಗೌಡ.—ಇಲ್ಲಿ ಜಡ್‌ಕೊ ಸಿಸ್ಟಂ ವರ್ಕ್ ಮಾಡುವುದಕ್ಕೆ ಸರಿಯಾದ ಮೆಕಾನಿಕ್ಸ್ ಬಾರದೆ ಬೇಸಿನ್ನುಗಳು ಕೆಲಸಕ್ಕೆ ಉಪಯೋಗವಾಗದೆ ಇರುವ ಹಾಗೆ ಮಾಡಿ ಅವುಗಳ ಕೆಲಸ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಅದು ಸರ್ಕಾರದವರಿಗೆ ಗೊತ್ತಿಲ್ಲ.

ಶ್ರೀ ಎಂ. ಲಿಂಗೇಗೌಡ.—ಹೊಸದಾಗಿ ಜಡಕೋ ಸಿಸ್ಟಂ ಏಜೆನ್ಸಿಗಳನ್ನು ಎಲ್ಲೆಲ್ಲಿ ಇಟ್ಟಿದ್ದಾರೋ, ಅಲ್ಲೆಲ್ಲಾ ಟ್ರೈನ್ಡ್ ಮೆಕಾನಿಕ್ಸ್ ಇದ್ದಾರೋ ಅಥವಾ ವರ್ಕರ್ಸ್‌ಗೆ ಅದು ಅಕಸ್ಮಂ ಆಗುತ್ತದೋ ?

ಶ್ರೀ ಬಿ. ಡಿ. ಜತ್ತಿ.—ವರ್ಕರ್ಸ್ ವಿಷಯವೇ ಬೇರೆ.

ಶ್ರೀ ಎಂ. ಲಿಂಗೇಗೌಡ.—ರೇಷ್ಮೆ ತೆಗೆಯುವುದಕ್ಕೆ ವರ್ಕರ್ಸ್ ಅಕಸ್ಮಂ ಆಗಬೇಕು. ಅವುಗಳಲ್ಲಿನ ಮೆಕಾನಿಜಂ ಎಲ್ಲರಿಗೂ ಗೊತ್ತಾಗುವುದಿಲ್ಲ. ಅದರಲ್ಲ ಸ್ವಲ್ಪ ಮೆಕಾನಿಜಂ ತಿಳಿದಿರುವವರು, ಇಂಜನಿಯರು, ಟ್ರೈನ್ಡ್ ಮೆಕಾನಿಕ್ಸ್ ಹೋಗಿ ಮಾಡರ್ಡ್ ಟ್ರೈನಿಂಗ್ ವರ್ಕರ್ಸ್‌ಗೆ ಕೊಡಬೇಕೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಮೆಕಾನಿಕ್ಸ್ ಅವಶ್ಯಕತೆ ಪ್ರತಿನಿತ್ಯ ಇಲ್ಲ. ಏನಾದರೂ ಬೇಕಾದರೆ ಅವರ ಸಲಹೆಯನ್ನು ತೆಗೆದುಕೊಳ್ಳುವುದಕ್ಕೆ ಕರೆಸಬೇಕು.

Communal ratio in respect of appointments to Government Services.

*Q.—384. Sri M. LINGE GOWDA (Kanakapura).—

Will the Government be pleased to state :—

whether the Public Service Commission gives due regard to communal ratio in respect of appointments to Government services ?

A.—Sri B. D. JATTI (Chief Minister).—

The primary responsibility for ensuring that the communal reservations are adhered to is on the appointing authorities and they have to intimate the Public Service Commission the number of vacancies reserved for Scheduled Castes and Scheduled Tribes and Backward Classes.

ಶ್ರೀ ಎಂ. ಲಿಂಗೇಗೌಡ.—ಸರ್ಕಾರಿ ನೌಕರಿಗಳಿಗೆ ಜನರನ್ನು ನೇಮಕಮಾಡಿಕೊಳ್ಳುವಾಗ ಆಯಾಯ ಕೋಮುಗಳ ಪ್ರಮಾಣಕ್ಕನುಸಾರವಾಗಿ ನೇಮಕ